ಓ.ಎಸ್. 117/2016 **ಪಿ.ಡಬ್ಲೂಃ 1**

ಮಧ್ಯಕಾಲಿನ ಅರ್ಜಿ ಆದೇಶ ದಿಃ **19.01.2023** ರ ಮೇರೆಗೆ ಸಾಕ್ಷಿಯನ್ನು ಹಿಂದಕ್ಕೆ ದಿಃ **06.02.2023** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಎಲ್.ಎನ್. ವಕೀಲ**ರಿಂದ**</u>

ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಹೆಚ್ .ಡಿ ಕೋಟೆಯಲ್ಲಿ ನನ್ನ ಮದುವೆ ಆದಾಗಿನಿಂದ ಅಂದರೆ ಕಳೆದ 36 ವರ್ಷಗಳಿಂದ ವಾಸವಾಗಿದ್ದೇನೆ. ಅಣ್ಣನಾದ ಪ್ರತಿವಾದಿ 1 ರವರು ಮೈಸೂರಿನಲ್ಲಿ ವಾಸವಾಗಿದ್ದಾರೆ, ಸಾಕ್ಷಿ ಮುಂದುವರೆದು ಅವರು ಅಲ್ಲಿ ಸರ್ಕಾರಿ ನೌಕರಿಯಲ್ಲಿ ಇರುವ ಕಾರಣ ಕೆಲಸ ಮೈಸೂರಿನಲ್ಲಿ ವಾಸವಾಗಿದ್ದಾರೆ ಎನ್ನುತ್ತಾರೆ. ಅದೇ ರೀತಿ ನನ್ನ 2 ನೇ ಅಣ್ಣ 2 ನೇ ಪ್ರತಿವಾದಿ ಆಸ್ವಾಳು ಗ್ರಾಮದಲ್ಲಿ ವಾಸವಾಗಿದ್ದಾರೆ. 3 ನೇ ಪ್ರತಿವಾದಿ ನನ್ನ ಅಣ್ಣ 2 ನೇ ಪ್ರತಿವಾದಿ ಮಗ ಎಂದರೆ ಸರಿ. ಅವರು ತಂದೆ ಜೊತೆ ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಆಸ್ವಾಳು, ಅಣ್ಣರಾಯಪುರ ಮತ್ತು ದೈತ್ಯನಕೆರೆಕಾವಲು ಗ್ರಾಮಗಳಲ್ಲಿವೆ. ದಾವಾ ಆಸ್ತಿಗಳೆಲ್ಲವನ್ನು ಆಸ್ವಾಳು ಗ್ರಾಮದಲ್ಲಿ ವಾಸವಾಗಿರುವ ನನ್ನ 2 ನೇ ಅಣ್ಣ ಮತ್ತು ಅವರ ಕುಟುಂಬಸ್ಥರು ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮದುವೆ ಆದಾಗಿನಿಂದ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದರಿಂದ ಹಾಗೂ ನನ್ನ ಮೊದಲನೆ ಅಣ್ಣ ಸರ್ಕಾರಿ ನೌಕರಿ ಕಾರಣ ಮೈಸೂರಿನಲ್ಲೆ ವಾಸವಾಗಿದ್ದು, ದಾವಾ ಸ್ವತ್ತುಗಳೆಲ್ಲವನ್ನು 2 ಮತ್ತು 3 ನೇ ಪ್ರತಿವಾದಿಗಳೆ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಾತ ಹೆಸರು ಬಿ.ಬೊರೇಗೌಡ ಆಗಿದೆ. ನನ್ನ ತಾತನಿಗೆ ಒಟ್ಟು 4 ಗಂಡು ಮಕ್ಕಳು ಮತ್ತು 3 ಹೆಣ್ಣು ಮಕ್ಕಳು. ಗಂಡು ಮಕ್ಕಳೆಂದರೆ ನನ್ನ ತಂದೆ ಕೆಂಪೇಗೌಡ, ಅವರ ಸಹೋದರರಾದ ಪುಟ್ಟಸ್ವಾಮಿಗೌಡ, ರಾಮಚಂದ್ರೇಗೌಡ, ಶಿವಣ್ಣೇಗೌಡ, ಹೆಣ್ಣು ಮಕ್ಕಳ ಪೈಕಿ ಒಬ್ಬರು ಪುಟ್ಟಮ್ಮ, ಪುಟ್ಟತಾಯಮ್ಮ, ದೇವಮ್ಮರವರಾಗಿದ್ದಾರೆ. ನನ್ನ ತಾತ ಬಿ ಬೋರೇಗೌಡರು ತಮ್ಮ ಸ್ವತ್ತುಗಳನ್ನು 4 ಜನ

ಗಂಡು ಮಕ್ಕಳೊಂದಿಗೆ ವಿಭಾಗ ಮಾಡಿಕೊಂಡಿದ್ದರು. ನನ್ನ ತಾತನ 3 ಜನ ಹೆಣ್ಣು ಮಕ್ಕಳು ಸದರಿ ವಿಭಾಗದಲ್ಲಿ ಪಾಲ್ಗೊಂಡಿರಲಿಲ್ಲ. ನನ್ನ ತಾತನಿಗೆ ಸಂಬಂಧಪಟ್ಟ ಸ್ವತ್ತುಗಳು ವಿಭಾಗ ಆಗಿವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ದಾಖಲೆಗಳ ಪೈಕಿ ನನ್ನ ತಾತ ವಿಭಾಗ ಮಾಡಿಕೊಂಡಿದ್ದಾರೆ ಎಂದು ತೋರಿಸುವ ಯಾವುದೆ ದಾಖಲೆ ಹಾಜರು ಪಡಿಸಿಲ್ಲ. ನಾನು ಈ ದಾವಾದಲ್ಲಿ ಕಾಣಿಸಿರುವ ಐಟಂ 1 ರಿಂದ 18 ರ ಸ್ವತ್ತುಗಳೆಲ್ಲವು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿದ್ದ ಯಾವುದೆ ಸ್ವತ್ತುಗಳನ್ನು ಇಲ್ಲಿ ಸೇರಿಸಿಲ್ಲ, ಆದರೆ ಈ ದಾವಾದಲ್ಲಿ ಸೇರ್ಪಡೆ ಮಾಡಿದ ಎಲ್ಲಾ ಸ್ವತ್ತುಗಳು ನನ್ನ ತಂದೆ ಕೆಂಪೇಗೌಡರ ಸ್ವಯಾರ್ಜಿತ ಸ್ವತ್ತುಗಳು ಆಗಿವೆ ಎಂದರೆ ಸರಿಯಲ್ಲ.

ನನ್ನ ತಂದೆಯು ದಾವಾ ಐಟಂ 1 ರಿಂದ 18 ಹಾಗೂ ಉಳಿಕೆ ಜಮೀನುಗಳಿಗೆ ಸಂಬಂಧಪಟ್ಟಂತೆ 3 ನೇ ಪ್ರತಿವಾದಿಯ ಹೆಚ್ಚುವರಿ ಪ್ರತಿವಾದ ಪತ್ರದಲ್ಲಿ ಕಾಣಿಸಿರುವಂತೆ ನನಗೆ ಹಾಗೂ ಪ್ರತಿವಾದಿ 1 ರಿಂದ 3 ರವರಿಗೆ ತಮ್ಮ ಜೀವಿತಾವಧಿಯಲ್ಲಿ ನೋಂದಾಯಿತ ಮರಣ ಶಾಸನ ಪತ್ರದ ಮೂಲಕ ಸ್ವತ್ತುಗಳನ್ನು ವಿಲೇವಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಮರಣ ಶಾಸನ ಪತ್ರದ ರೀತ್ಯಾ ಎಂ.ಆರ್ ಮತ್ತು ಖಾತೆಗಳು ಆಗಿದ್ದು, ನಾವುಗಳೆಲ್ಲಾ ಪ್ರತ್ಯೇಕ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ಈ ರೀತಿ ನಾವು ಖಾತೆ ವಗೈರೆ ಮಾಡಿಕೊಂಡು ಪ್ರತ್ಯೇಕ ಸ್ವಾಧೀನಾನುಭವದಲ್ಲಿ ಇದ್ದಾಗ್ಯೂ ಪ್ರತಿವಾದಿ 2 ಮತ್ತು 3 ರವರಿಗೆ ತೊಂದರೆ ಕೊಡುವ ಸಲುವಾಗಿ ನಾನು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ. 61 ರ ಕ್ರಯ ಪತ್ರವನ್ನು ನಾನು ಮತ್ತು ನನ್ನ ಮಕ್ಕಳು ಸಂಜೀವ ಶೆಟ್ಟಿ ಎಂಬುವವರಿಗೆ ಬರೆದುಕೊಟ್ಟಿದ್ದೇವೆ ಎಂದರೆ ಸರಿ ಎಂದು ನುಡಿದು ನನ್ನ ಅಣ್ಣಂದಿರು ಅದನ್ನು ಬರೆಸಿಕೊಟ್ಟಿದ್ದಾರೆ ಎನ್ನುತ್ತಾರೆ. ಸರ್ವೆ ನಂ. 71/3, ರಲ್ಲಿ 1 ಎಕರೆ, 2 ಗುಂಟೆ, ಸರ್ವೆ ನಂ. 71/5 ರಲ್ಲಿ 19 ಗುಂಟೆ, ಸರ್ವೆ 73/5 ರಲ್ಲಿ 35 ಗುಂಟೆ ಒಟ್ಟು 2 ಎಕರೆ 16 ಗುಂಟೆ ಈ ಸ್ವತ್ತುಗಳನ್ನು ನಾನು ಈ ಭಾಗಾಂಶದ

ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಅದೆ ರೀತಿ ಕ್ರಯದಾರರಾದ ಸಂಜೀವ ಶೆಟ್ಟಿಯವರನ್ನು ಕೂಡ ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಸರ್ವೆ ನಂ. 60/47 ಪಿ1 ನಲ್ಲಿ 4 ಎಕರೆ, ಸರ್ವೆ ನಂ. 61/68 ಪಿ ನಲ್ಲಿ 1 ಎಕರೆ, ಸರ್ವೆ ನಂ. 1/13 ಬಿ ನಲ್ಲಿ 4 ಎಕರೆ, 12 ಗುಂಟೆ ಈ ಸ್ವತ್ತುಗಳನ್ನು ನನ್ನ ತಂದೆ ಬಿ ಕೆಂಪೇಗೌಡ ತಮ್ಮ ಜೀವಿತಾವಧಿಯಲ್ಲಿ ತಮ್ಮ ದುಡ್ಡಿನಿಂದ ಕ್ರಯಕ್ಕೆ ಪಡೆದು ಅವುಗಳನ್ನು ನನ್ನ ಹೆಸರಿಗೆ ನೊಂದಣಿ ಮಾಡಿಕೊಡಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ವಿಚಾರವನ್ನು ದಿಃ 24.04.2013 ರ ಮರಣ ಶಾಸನ ಪತ್ರದಲ್ಲಿ ನಮೂದು ಮಾಡಿದ್ದಾರೆ ಎಂದರೆ ಸುಳ್ಳು. ನಾನು ಮತ್ತು 1 ನೇ ಪ್ರತಿವಾದಿಯಾದ ನನ್ನ ಹಿರಿಯ ಅಣ್ಣ ಅನ್ಯೋನ್ಯವಾಗಿದ್ದೇನೆ ಎಂದರೆ ನಾನು ಎಲ್ಲಾ ಅಣ್ಣಂದಿರ ಜೊತೆ ಅನ್ಯೋನ್ಯವಾಗಿದ್ದೇನೆ ಎನ್ನುತ್ತಾರೆ. ನನ್ನ ಅಣ್ಣ 1 ನೇ ಪ್ರತಿವಾದಿಯ ಚಿತಾವಣೆ ಮೇರೆಗೆ ನಾನು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮಾಡಿರುವ ಮರಣ ಶಾಸನದ ರೀತ್ಯಾ ನಾವೆಲ್ಲಾ ಪ್ರತ್ಯೇಕ ಖಾತೆ ಹೊಂದಿ ನಮ್ಮ ನಮ್ಮ ಸ್ವತ್ತುಗಳ ಸ್ವಾಧೀನಾನುಭವದಲ್ಲಿ ಇದ್ದಾಗ್ಯೂ 1 ನೇ ಪ್ರತಿವಾದಿಯ ಮಾತು ಕೇಳಿ 2 ಮತ್ತು 3 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 2 ಮತ್ತು 6 ರ ಸ್ವತ್ತುಗಳು ವಿಲ್ ಪ್ರಕಾರ 3 ನೇ ಪ್ರತಿವಾದಿಗೆ ಬಂದಿವೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳ ಖಾತೆ ಕೋರಿ 3 ನೇ ಪ್ರತಿವಾದಿ ಅರ್ಜಿ ಹಾಕಿ ನಾನು ತಕರಾರು ಸಲ್ಲಿಸಿದೆ ಎಂದರೆ ಸರಿ. ಸದರಿ ತಕರಾರು ರೀತ್ಯಾ ಎ.ಸಿ ನ್ಯಾಯಾಲಯದಲ್ಲಿ ಆರ್. ಎ 36/2016-17 ರಂತೆ ಪ್ರಕರಣದ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣದ ಆದೇಶದಲ್ಲಿ ನಾನು ಸಲ್ಲಿಸಿದ ತಕರಾರನ್ನು ವಜಾಗೊಳಿಸಿ ವಿಲ್ ನಂತೆ ಖಾತೆ ಮಾಡಲು ಆದೇಶವಾಗಿದೆ ಎಂದರೆ ಸರಿಯಲ್ಲ. ಸದರಿ ಆದೇಶವನ್ನು ನಾನೇ ಇಲ್ಲಿ ನಿಪಿ. 67 ರಂತೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಆದೇಶದಂತೆ ಖಾತೆ ಆಗಿದೆ, ಈ ವಿಚಾರ ನನಗೂ ತಿಳಿದಿದೆ ಆದಾಗ್ಯೂ ನಾನು ಈ ದಾವೆ ಸಲ್ಲಿಸಿದ್ದೇನೆ

ಎಂದರೆ ಸರಿಯಿಲ್ಲ. ಎ.ಸಿ ರವರ ಸದರಿ ಆದೇಶದ ವಿರುದ್ಧ ನಾನು ಡಿ.ಸಿ ನ್ಯಾಯಾಲಯದಲ್ಲಿ ಯಾವುದೆ ಆದೇಶ ಸಲ್ಲಿಸಿಲ್ಲ. ನಾನು ನನ್ನ ತಂದೆಗೆ ನನ್ನ ತಾತನಿಂದ ಬಂದಂತಹ ಆಸ್ತಿಗಳನ್ನು ಈ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ, ಆದರೆ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಿಗೆ ಮಾತ್ರ ಈ ದಾವೆ ಹೂಡಿರುವ ಕಾರಣ ಈ ದಾವೆ ವಜಾ ಆಗಬೇಕಾಗುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸಂಬಂಧಪಟ್ಟದ ಸ್ವಯಾರ್ಜಿತ ಆಸ್ತಿಗಳು ಯಾವ ರೀತಿ ವಿಲೇವಾರಿ ಆಗಬೇಕು ಎಂದು ನನ್ನ ತಂದೆ ವಿಲ್ ಮಾಡಿರುವ ಕಾರಣ ಸದರಿ ಸ್ವತ್ತುಗಳ ಮೇಲೆ ಹೂಡಿರುವ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 2 ಮತ್ತು 3 ರವರು ಪ್ರತಿಪಾದಿಸುತ್ತಿರುವ ಮತ್ತು ನನ್ನ ತಂದೆ ಮಾಡಿರುವ ಮೇಲ್ಕಂಡ ಮರಣ ಶಾಸನ ಪತ್ರವನ್ನು ನಾನು ಈಗಾಗಲೆ ಪ್ರಶ್ನೆ ಮಾಡಿದ್ದೇನೆ. ಈ ರೀತಿ ನಾನು ವಿಲ್ ಅನ್ನು ಪ್ರಶ್ನೆ ಮಾಡಿರುವ ದಾಖಲೆಯನ್ನು ಇಲ್ಲಿ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ನಿಪಿ. 1 ರಿಂದ 67 ರಲ್ಲಿ ಸದರಿ ದಾಖಲೆ ಎಲ್ಲಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಮರಣ ಶಾಸನ ಪತ್ರವನ್ನಾಗಲಿ ಅಥವಾ ಮರಣ ಶಾಸನ ಪತ್ರದ ಆಧಾರ ಮೇಲೆ ಬದಲಾವಣೆಯಾಗಿರವ ಖಾತೆ ಗಳಾಗಲಿ ಎಲ್ಲಿಯೂ ಪ್ರಶ್ನಿಸಿಲ್ಲ, ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.